



ಕರ್ನಾಟಕ ತಂಡದ ಮಾಜಿ ನಾಯಕ ವಿನಯ್ ಕುಮಾರ್ ರಣಜಿ ಟ್ರೋಫಿಗೆ ಮುತ್ತಿಕ್ಕಿದ ಕ್ಷಣ

ಮನವರಿಕೆಯಾಗುವಂತೆ ಮಾಡಲಾಯಿತು. ರಣಜಿ ಆರಂಭದಲ್ಲಿ ಮೂರು ದಿನಗಳ ಪಂದ್ಯಗಳಾಗಿದ್ದವು. 1940ರಿಂದ 43ರ ತನಕ ಮೊದಲ ಇನಿಂಗ್ಸ್ ಮುನ್ನಡೆ ನಿರ್ಧಾರವಾಗುವ ತನಕ ಪಂದ್ಯಗಳನ್ನು ನಡೆಸಲಾಗುತ್ತಿತ್ತು. ಹೀಗಾಗಿ ಕೆಲವು ಬಾರಿ ಆರು ದಿನಗಳವರೆಗೂ ಪಂದ್ಯಗಳು ನಡೆದ ಉದಾಹರಣೆಗಳೂ ಇವೆ.

ಈಗ 28 ರಾಜ್ಯಗಳಿಂದ 38 ತಂಡಗಳು, ನಾಲ್ಕು ಕೇಂದ್ರಾಡಳಿತ ಪ್ರದೇಶದ ತಂಡಗಳು ರಣಜಿ ಆಡುತ್ತಿವೆ. ಕ್ರಿಕೆಟ್ ಹೆಚ್ಚು ಬೆಳವಣಿಗೆ ಕಾಣದ ಅರುಣಾಚಲ ಪ್ರದೇಶ, ಮಣಿಪುರ, ಮೇಘಾಲಯ, ನಾಗಾಲ್ಯಾಂಡ್, ಪುದುಚೇರಿ, ಸಿಕ್ಕಿಂ, ಬಿಹಾರ್, ಉತ್ತರಾಖಂಡ ತಂಡಗಳ ನೂರಾರು ಆಟಗಾರರು ಪ್ರತಿಷ್ಠಿತ ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ ಆಡುವಂತಾಯಿತು. ಈ ರಾಜ್ಯಗಳಿಂದ ಅನೇಕ ಸ್ಕೋರರ್‌ಗಳು, ಅಂಪೈರ್‌ಗಳು, ಪಿಚ್ ಕ್ಯುರೇಟರ್‌ಗಳಿಗೆ ಅವಕಾಶ ಲಭಿಸಿತು. ಇದೇ ಮೊದಲ ಬಾರಿಗೆ ಸಿಕ್ಕಿಂ ಕೂಡ ರಣಜಿ ಪಂದ್ಯಗಳಿಗೆ ಆತಿಥ್ಯ ವಹಿಸಿತು.

ಪ್ರತಿ ವರ್ಷದ ರಣಜಿ ಟೂರ್ನಿಯಲ್ಲಿ 600 ಆಟಗಾರರು, ನೂರಾರು ಜನ ಪಂದ್ಯದ ಅಧಿಕಾರಿಗಳು, ಸ್ಕೋರರ್‌ಗಳಿಗೆ ಟೂರ್ನಿ 'ಕಲಿಕಾ ಶಾಲೆ'ಯಂತಿದೆ. ನಾರಾಯಣನ್ ಜನನಿ, ವೃಂದಾ ರಾಠಿ, ಗಾಯತ್ರಿ ವೇಣುಗೋಪಾಲನ್ ಅವರಂಥ ಮಹಿಳೆಯರು ಕೂಡ ಅಂಪೈರ್‌ಗಳಾಗಿ ಕೆಲಸ ಮಾಡಲು ಅವಕಾಶ ಸೃಷ್ಟಿಸಿತು. ಇಷ್ಟೆಲ್ಲಾ ಅವಕಾಶಗಳನ್ನು ಗಳಿಸಿಕೊಟ್ಟ ರಣಜಿಯನ್ನು ಇತ್ತೀಚಿನ ವರ್ಷಗಳಲ್ಲಿ ದುರ್ಬಲಗೊಳಿಸಲಾಗುತ್ತಿದೆ. ವರ್ಷಕ್ಕೆ ಒಂದು ಸಲ ರಣಜಿ ಟೂರ್ನಿಯನ್ನು ಆಯೋಜಿಸಲು ಇಲ್ಲದ ಕಾರಣಗಳನ್ನು ಹೇಳಿ ಪದೇ ಪದೇ ಮುಂದೂಡುವ ಪ್ರಯತ್ನವನ್ನು ಬಿಸಿಸಿಐ ಮಾಡುತ್ತಿದೆ.

ಪ್ರತಿ ಸಲವೂ ಕೋಟ್ಯಂತರ ರೂಪಾಯಿ ಆದಾಯ ತಂದುಕೊಡುವ ಐಪಿಎಲ್ ಟೂರ್ನಿಯನ್ನು ವರ್ಷಕ್ಕೆ ಎರಡು ಬಾರಿ ನಡೆಸುವ ಹುಮಸ್ಸು ಇರುವ ಬಿಸಿಸಿಐಗೆ, ರಣಜಿ ಆಯೋಜಿಸಲು ಸಮಯವೇ ಇಲ್ಲದಂತಾಗಿದೆ. ದೇಶದಲ್ಲಿ ಚುನಾವಣೆಗಳು ನಡೆದಾಗ, ಕೋವಿಡ್ ಕಾಡಿದಾಗ ಹೊರದೇಶಗಳ ಆತಿಥ್ಯದಲ್ಲಿ ಐಪಿಎಲ್ ನಡೆಸಲಾಗಿದೆ. ಜಗತ್ತಿನಲ್ಲಿಯೇ ಅತ್ಯಂತ ಉತ್ತುಂಗದಲ್ಲಿರುವ ಐಪಿಎಲ್ ಮತ್ತು ಟಿ–20 ಅಂತರರಾಷ್ಟ್ರೀಯ ಪಂದ್ಯಗಳನ್ನು ಜೈವಿಕ ಬಬಲ್‌ಗಳಲ್ಲಿ ನಡೆಸಲಾಗಿದೆ. ಟೆಸ್ಟ್ ಸರಣಿಗಳು ಕೂಡ ಕೋವಿಡ್ ಸಮಯದಲ್ಲಿಯೇ ನಡೆದವು.

ಚುಟುಕು ಕ್ರಿಕೆಟ್ ಮಾದರಿ ನೀಡುವ ಲಾಭ, ತಂದುಕೊಡುವ ಜನಪ್ರಿಯತೆ ರಣಜಿಯಿಂದ ಬರುವುದಿಲ್ಲವಾದರೂ ರಾಷ್ಟ್ರೀಯ ತಂಡದ ಗಟ್ಟಿತನ, ಆಟಗಾರರ ಶಕ್ತಿವೃದ್ಧಿ, ಆಲ್‌ರೌಂಡ್ ಪ್ರದರ್ಶನ ತೋರಲು ಬೇಕಾದ ಸಾಮರ್ಥ್ಯ ಹಾಗೂ ಕ್ರಿಕೆಟ್‌ನ ನೈಜತೆ ಉಳಿಯುವುದೇ ದೇಶಿ ಕ್ರಿಕೆಟ್‌ನಿಂದ. ಹೊಸ ಕ್ರಿಕೆಟಿಗರ ಹಾಗೂ ಪೋಷಕರ ಆಕರ್ಷಣೆಯಾದ ಐಪಿಎಲ್‌ನಿಂದ ಕ್ರಿಕೆಟ್‌ನ ಮೂಲ ಸೌಂದರ್ಯವೇ ಹಾಳಾಗುತ್ತಿದೆ. ಈಗಿನ ಸಮಯದಲ್ಲಿ ರಣಜಿ ಟ್ರೋಫಿಯನ್ನು ಉತ್ತೇಜಿಸುವುದು ಆಟದ ಪ್ರಗತಿ ಮತ್ತು ಉಳಿವಿಗೆ ನೀಡುವ ದೊಡ್ಡ ಕೊಡುಗೆಯಾಗಿದೆ.